# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | 59 (04) |
| ಉತ್ತರಿಸಬೇಕಾದ ದಿನಾಂಕ | 04-03-2025(ನಗರಾಭಿವೃದ್ಧಿ ಇಲಾಖೆಯಿಂದ ವರ್ಗಾವಣೆ) |
| ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಕೊಳಗೇರಿ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯಾದ್ಯಂತ ಬರುವ ವಿವಿಧ ಮಹಾನಗರ ಪಾಲಿಕೆ / ನಗರ / ಪಟ್ಟಣಗಳ ವ್ಯಾಪ್ತಿಯಲ್ಲಿ ಮಂಡಳಿ ಕಾಯ್ದೆಯಡಿ ಒಟ್ಟು 3019 ಕೊಳಗೇರಿ ಪ್ರದೇಶಗಳನ್ನು ಗುರುತಿಸಲಾಗಿರುತ್ತದೆ. ಇವುಗಳ ಪೈಕಿ ಒಟ್ಟು 2866 ಕೊಳಗೇರಿ ಪ್ರದೇಶಗಳನ್ನು ಘೋಷಿಸಲಾಗಿರುತ್ತದೆ. ಜಿಲ್ಲಾವಾರು ಮಾಹಿತಿಗಳನ್ನು **ಅನುಬಂಧ – ಅ** ರಲ್ಲಿ ಒದಗಿಸಲಾಗಿದೆ. |
| ಆ) | ಕೊಳಗೇರಿಗಳಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಸರ್ಕಾರ ಯಾವ ಯಾವ ಸೌಲಭ್ಯ ಗಳನ್ನು ನೀಡುತ್ತಿದೆ; | ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕೊಳಚೆ ಪ್ರದೇಶಗಳ ಅಭಿವೃದ್ಧಿಯೋಜನೆಗೆ ಸರ್ಕಾರವು ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ರಾಜ್ಯಾದ್ಯಂತ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪ, ಸಮುದಾಯ ಭವನ ಇತ್ಯಾಧಿ ಅಭಿವೃದ್ಧಿ ಕಾಮಗಾರಿಗಳನ್ನು ಮತ್ತು ಕೇಂದ್ರ ಪುರಸ್ಕೃತ ಹಾಗೂ ರಾಜ್ಯ ವಸತಿ ಯೋಜನೆಗಳನ್ನು ಸಮನ್ವಯಗೊಳಿಸಿ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. |
| ಇ) | ಸದರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಯುವಕರಿಗೆ ಉದ್ಯೋಗ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; | ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಯುವಕರಿಗೆ ಉದ್ಯೋಗ ನೀಡಲು ಮಂಡಳಿಯಿಂದ ಯಾವುದೇ ಕಾರ್ಯಕ್ರಮಗಳನ್ನು ಕೈಗೊಂಡಿರುವುದಿಲ್ಲ. |
| ಈ) | ಕೊಳಗೇರಿಗಳಲ್ಲಿ ವಾಸಿಸುತ್ತಿರುವವರಿಗೆ ವಸತಿ ವ್ಯವಸ್ಥೆ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಇದುವರೆಗೆ ಎಷ್ಟು ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದೆ. ? | ಕೊಳಗೇರಿಗಳಲ್ಲಿ ವಾಸಿಸುತ್ತಿರುವವರಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ರಾಜ್ಯಾದ್ಯಂತ ವಿವಿಧ ನಗರ / ಪಟ್ಟಣಗಳ ವ್ಯಾಪ್ತಿಯಲ್ಲಿ ಬರುವ ಆಯ್ದ ಘೋಷಿತ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 2000-2001ನೇ ಸಾಲಿನಿಂದ 2015ನೇ ಸಾಲಿನ ವರೆವಿಗೂ ಕೇಂದ್ರ ಪುರಸ್ಕೃತ ವಿವಿಧ ವಸತಿ ಯೋಜನೆಗಳಡಿ ಒಟ್ಟು 128597 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದೆ.<br><br>**ಅನುಬಂಧ – ಬ ರಲ್ಲಿ** ಒದಗಿಸಲಾಗಿದೆ. |

| | | |
|---|---|---|
| | | ಪ್ರಸ್ತುತ 2015-16ನೇ ಸಾಲಿನಿಂದ ಇದುವರೆವಿಗೂ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಾದ ಡಾ. ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಸಮನ್ವಯಗೊಳಿಸಿ ಒಟ್ಟು 180253 ಮನೆಗಳನ್ನು ನಿರ್ಮಿಸಲು ಮಂಜೂರಾತಿ ದೊರಕಿದ್ದು. ಈ ಪೈಕಿ 2024ನೇ ಮಾರ್ಚ್ ಮಾಹೆಯಲ್ಲಿ ಮೊದಲನೇ ಹಂತದಲ್ಲಿ 36789 ಮನೆಗಳನ್ನು ನಿರ್ಮಿಸಿ, ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ.<br><br>ಎರಡನೇ ಹಂತದಲ್ಲಿ 39843 ಮನೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಶೀಘ್ರದಲ್ಲೇ ಹಸ್ತಾಂತರಿಸಲು ಉದ್ದೇಶಿಸಲಾಗಿದೆ. |

ಸಂಖ್ಯೆ: ವಇ 17 ಎಸ್‌ಬಿಎಂ 2025

**(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

| ಅನುಬಂಧ 'ಅ' | | | | |
|---|---|---|---|---|
| **ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ** | | | | |
| **ರಾಜ್ಯಾದ್ಯಂತ ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ** | | | | |
| **ಕ್ರ.ಸಂ** | **ಜಿಲ್ಲೆ ಹೆಸರು** | **ಒಟ್ಟು ಕೊಳಚೆ ಪ್ರದೇಶಗಳ ಸಂಖ್ಯೆ** | **ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ** | **ಗುರುತಿಸಿರುವ ಕೊಳಚೆ ಪ್ರದೇಶಗಳ ಸಂಖ್ಯೆ** |
| 1 | ಬೆಂಗಳೂರು ನಗರ | 433 | 413 | 20 |
| 2 | ಬೆಂಗಳೂರು ಗ್ರಾಮಾಂತರ | 33 | 33 | 0 |
| 3 | ಬಾಗಲಕೋಟೆ | 104 | 104 | 0 |
| 4 | ಬಳ್ಳಾರಿ | 92 | 89 | 3 |
| 5 | ಬೆಳಗಾವಿ | 250 | 194 | 56 |
| 6 | ಬೀದರ | 68 | 68 | 0 |
| 7 | ಚಿಕ್ಕಬಳ್ಳಾಪುರ | 44 | 44 | 0 |
| 8 | ಚಿಕ್ಕಮಗಳೂರು | 54 | 54 | 0 |
| 9 | ಚಿತ್ರದುರ್ಗ | 69 | 64 | 5 |
| 10 | ಚಾಮರಾಜನಗರ | 68 | 67 | 1 |
| 11 | ದಾವಣಗೆರೆ | 80 | 80 | 0 |
| 12 | ಧಾರವಾಡ | 133 | 133 | 0 |
| 13 | ದಕ್ಷಿಣ ಕನ್ನಡ | 26 | 23 | 3 |
| 14 | ಗದಗ | 102 | 87 | 15 |
| 15 | ಹಾಸನ | 105 | 105 | 0 |
| 16 | ಹಾವೇರಿ | 107 | 103 | 4 |
| 17 | ಕಲಬುರಗಿ | 149 | 148 | 1 |
| 18 | ಕೊಡಗು | 10 | 10 | 0 |
| 19 | ಕೋಲಾರ | 61 | 61 | 0 |
| 20 | ಕೊಪ್ಪಳ | 45 | 45 | 0 |
| 21 | ಮಂಡ್ಯ | 74 | 56 | 18 |
| 22 | ಮೈಸೂರು | 115 | 114 | 1 |
| 23 | ರಾಯಚೂರು | 82 | 82 | 0 |
| 24 | ರಾಮನಗರ | 55 | 51 | 4 |
| 25 | ಶಿವಮೊಗ್ಗ | 165 | 164 | 1 |
| 26 | ತುಮಕೂರು | 130 | 127 | 3 |
| 27 | ಉತ್ತರ ಕನ್ನಡ | 49 | 41 | 8 |
| 28 | ಉಡುಪಿ | 17 | 17 | 0 |
| 29 | ವಿಜಯಪುರ | 139 | 129 | 10 |
| 30 | ವಿಜಯನಗರ | 111 | 111 | 0 |
| 31 | ಯಾದಗಿರಿ | 49 | 49 | 0 |
| | **ಒಟ್ಟು** | **3019** | **2866** | **153** |

ಸಹಾಯಕ ಕಂದಾಯ ಅಧಿಕಾರಿ
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಬೆಂಗಳೂರು.

# ಮಂಡಳಿವತಿಯಿಂದ ವಿವಿಧ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಿ, ಹಂಚಿಕೆ ಮಾಡಿರುವ ಮನೆಗಳ ವಿವರ

| ಕ್ರ.ಸ | ಯೋಜನೆ | ನಿರ್ಮಿಸಿರುವ/ ನಿರ್ಮಿಸಲಾಗಿರುವ ಮನೆಗಳ ಸಂಖ್ಯೆ | ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ |
|---|---|---|---|
| 1 | ಹುಡ್ಕೋ ವಸತಿ ಯೋಜನೆ (1983-2000) | 30460 | 30460 |
| 2 | ವಾಂಬೇ ವಸತಿ ಯೋಜನೆ(2000-2004) | 34538 | 34538 |
| 3 | ಎಸ್.ಸಿ.ಪಿ. ವಸತಿ ಯೋಜನೆ(1998-99) | 3080 | 3080 |
| 4 | ನರ್ಮ್-ಬಿ.ಎಸ್.ಯು.ಪಿ. (2005-2010) | 24315 | 24315 |
| 5 | ನರ್ಮ್-ಐ.ಹೆಚ್.ಎಸ್.ಡಿ.ಪಿ (2005-2010) | 17237 | 17237 |
| 6 | ರಾಜೀವ್ ಆವಸ್ ಯೋಜನೆ (2010-2015) | 19897 | 18967 |
| | **ಒಟ್ಟು** | **129527** | **128597** |
| 7 | ಪ್ರಧಾನಮಂತ್ರಿ ಆವಾಸ್ ಯೋಜನೆ (2015-2022) | 1,80,253 * | 36789 |
| | **ಒಟ್ಟಾರೆ** | **3,09,780** | **1,65,386** |

AEE, KSDB, Bangalore